ಒಳ್ಳೆಯ ವಾತಾವರಣದಲ್ಲಿ ಈ ಬಗ್ಗೆ ನಿರ್ಣಯವನ್ನು ತೆಗೆದುಕೊಳ್ಳಬೇಕೆಂದು ನಾನು ಒಮ್ಮೆ ಪ್ರಧಾನಮಂತ್ರಿಗಳಿಗೆ ಹೇಳಿದ್ದೇನೆ. ಈ ವಿಷಯದಲ್ಲಿ ತಡಮಾಡುವುದು ಸಾದುವಲ್ಲ ಆದಷ್ಟು ಜಾಗ್ರತೆ ಈ ಬಗ್ಗೆ ನಿರ್ಣಯ ತೆಗೆದು ಕೊಳ್ಳಬೇಕು ಎಂದು ಪದೇಪದೇ ಅನೇಕ ಮಾನ್ಯ ಸದಸ್ಯರು ತಮ್ಮ ಭಾವನೆಯನ್ನು ವ್ಯಕ್ತ ಮಾಡಿದ್ದಾರೆ ಎಂದು ನಾನು ಮತ್ತೆ ಪ್ರಧಾನಿಗೆ ಪತ್ರ ಬರೆಯುತ್ತೇನೆ. ಹಾಗೂ ದೆಹಲಿಗೆ ಹೋದಾಗ ಮತ್ತೆ ಅವರೊಡನೆ ಚರ್ಚೆ ಮಾಡುತ್ತೇನೆ.

Supply of Electricity to Villages

307. Sri M. MALLAPPA (Birur).—

Will the Chief Minister be pleased to state :—

(*a*) whether the Government is aware that the public of the villages of Chikkingala and Andehalli in Birur Hobli and Gubbihally and Chikbanur in Sakrepatna Hobli, Kadur Taluk are urging for providing Electricity to the Villages since a long time ;

(*b*) whether Government has prepared any estimates to provide electricity to the said villages ;

(*c*) if not, the reasons for the delay in providing electricity to the said villages ;

(*d*) the action Government proposes to take to provide electricity to the said villages ?

Sri D. PARAMESWARAPPA (Deputy Minister for Major Irrigation and Electricity).—

(*a*) Yes.

(*b*) Yes.

(*c*) For want of adequate finances.

(*d*) The question of inclusion of these villages in the next year's programme will be considered consistant with the funds that would be available.

ಶ್ರೀ ಎಂ. ಮಲ್ಲಪ್ಪ.—ಸ್ವಾಮಿ, ನಮ್ಮ ಜಿಲ್ಲೆಗೆ ಪ್ರತ್ಯೇಕವಾದ ಮತ್ತು ಸ್ವತಂತ್ರವಾದ ಎಂ.ಎಸ್.ಇ.ಬಿ. ಆಫೀಸಿತ್ತು. ಈಗ ಅದನ್ನು ಹರಿದು ಹಂಚಿ ಚಿಕ್ಕಮಗಳೂರು ಜಿಲ್ಲೆಯ ವಿದ್ಯುಚ್ಛಕ್ತಿಗೆ ಸಂಬಂಧಪಟ್ಟ ಆಡಳಿತವನ್ನು ಹಾಸನ, ತುಮಕೂರು ಮತ್ತು ಶಿವಮೊಗ್ಗ ಜಿಲ್ಲೆಗಳಿಗೆ ಕೊಟ್ಟಿದ್ದಾರೆ. ವಿದ್ಯುಚ್ಛಕ್ತಿ ಕೆಲಸ ಕಾರ್ಯಗಳಿಗೆ ಸರ್ಕಾರದವರು ಹಣವನ್ನು ಕೊಡುವಾಗ ಎರ್ಲಾ ಜಿಲ್ಲೆಗಳಿಗೂ ಸೇರಿಸಿ ಕೊಡುತ್ತಾರೆ. ಆದರೆ ಆ ಹಣ ಹಂಚಿಕೆಯಾಗುವಾಗ ನಮ್ಮ ಜಿಲ್ಲೆಗೆ ಸರಿಯಾಗಿ ಕೊಡುತ್ತಿಲ್ಲ. ಇಂಥಾ ಕ್ರಮಗಳಿಂದ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡತಕ್ಕದ್ದರಲ್ಲಿ ತಡವಾಗುತ್ತಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

†Sri D. PARAMESWARAPPA.—The question is with regard to supply of electricity to villages in Birur Hobli and Kadur Hobli ; it does not pertain to the establishment of a separate Executive Engineer's office in Chickmagalur District.

ಶ್ರೀ ಎಂ. ಮಲ್ಲಪ್ಪ.—ಈ ನಲವಾದರೂ ಈ ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುತ್ತೀರಾ ?

Sri D. PARAMESWARAPPA.—There is every probability that these villages would be included in the programme.

Transfer of Government Primary School Teachers

345. Sri PRABHU RAO JAGADALE (Hulsoor).—

Will the Minister for Education be pleased to state :—

(*a*) whether the Government has adopted as a policy not to post or transfer the Government Primary School teachers to their native villages with a view to improve the working of primary schools in the State ;

(*b*) if so, since when this is being followed ?

Sri N. M. KOTRABASAIAH SOGI (Deputy Minister for Education).—

(*a*) No.

(*b*) Does not arise.

Sri PRABHURAO JAGADALE.—I have no supplementaries.

Mr. SPEAKER.—Next question, since the Member has no supplementaries to put.

(*Several members rose to put supplementaries*).

Mr. SPEAKER.—If the member who has tabled the question has no supplementaries, it is not necessary for other Members to ask supplementaries. I have already called the next question.

Sri H. SIDDAVEERAPPA.—If you say that you have already called out the next question and so no supplementaries can now be allowed, we shall accept it. But I only submit that since there is time and since there are several members desirous of putting supplementaries, some more time may be allowed for supplementaries to this question.

Mr. SPEAKER.—Without making this as a precedent I shall allow a few supplementaries on this question, but this should not be cited as a precedent.

ಶ್ರೀ ಎನ್. ಚೆನ್ನೇಗೌಡ.—ಈ ಉಪಾಧ್ಯಾಯರುಗಳು ಶಾನುಭೋಗರಿಗಿಂತ ಜಾಸ್ತಿಯಾಗಿ ರಾಜಕಾರಣದಲ್ಲಿ ಸೇರಿಕೊಂಡು ತಮ್ಮ ಕಾಲವನ್ನೆಲ್ಲಾ ಅದರಲ್ಲಿ ತೊಡಗಿಸುತ್ತಿದ್ದಾರೆ. ಈ ವಿಚಾರವನ್ನು ಈ ಸಭೆಯಲ್ಲಿ ವಿರೋಧಪಕ್ಷದವರು ಮತ್ತು ಆಡಳಿತ ಪಕ್ಷದವರು ಸಹ ಆಗಿಂದಾಗ್ಗೆ ಹೇಳುತ್ತಿರುತ್ತಾರೆ. ಆದ್ದರಿಂದ ಇವರನ್ನು ಅವರ ಸ್ವಂತ ಜಿಲ್ಲೆಯನ್ನು ಬಿಟ್ಟು ಬೇರೆ ಜಿಲ್ಲೆಗಳಿಗೆ ವರ್ಗ ಮಾಡಲು ಸರ್ಕಾರದವರು ಒಪ್ಪಿಕೊಳ್ಳುತ್ತಾರೆಯೇ ?